SACRIFICE
316

# ಸಜೀವಯಜ್ಞ

*"ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ."* ರೋಮಾಪುರದವರಿಗೆ 12:1-2

**ನಿಮ್ಮ ಯಜ್ಞ** ನಿಮ್ಮ ದೇಹಗಳನ್ನು *"ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ"* ಅರ್ಪಿಸಿರಿ ಎಂದು ಉಪದೇಶವನ್ನು ಆಗಾಗ್ಗೆ ತಪ್ಪಾಗಿ ತಿಳಿದುಕೊಳ್ಳಲಾಗುತ್ತದೆ. ಆದಾಗ್ಯು, ಯೇಸು ಕ್ರಿಸ್ತನಲ್ಲಿ ಕೇವಲ ಒಬ್ಬ ವಿಶ್ವಾಸಿಯಾಗಿರುವುದಕ್ಕಿಂತ ಹೆಚ್ಚಿನವರಾಗಿರಲು ಸರಿಯಾದ ಮಾರ್ಗವನ್ನು ನಿಮಗೆ ತೋರಿಸುವುದು ಬಹಳ ಪ್ರಾಮುಖ್ಯವಾಗಿದೆ. ರಕ್ಷಣೆ ಹೊಂದಿದ ನಂತರ ಪ್ರತಿಯೊಬ್ಬ ವಿಶ್ವಾಸಿಯೂ ನಿರ್ದಿಷ್ಟವಾದ ಯಜ್ಞವನ್ನು ಅರ್ಪಿಸುವಂತೆ ವಚನ ಒಂದು ಸವಾಲು ಹಾಕುತ್ತದೆ. ಆ ಯಜ್ಞವನ್ನು ಅರ್ಪಿಸಿದ ನಂತರದ ಜೀವಿತವನ್ನು ಕುರಿತು ಎರಡನೇ ವಚನವು ಮಾರ್ಗಸೂಚನೆಗಳನ್ನು ನೀಡುತ್ತದೆ. ನಿಮ್ಮ ಶಿಲುಬೆಯನ್ನು ದಿನಾಲು ಹೊತ್ತುಕೊಂಡು ಹೋಗುವ ಭಾಗವಾಗಿ ಪ್ರತಿದಿನವೂ ದೇವರಿಗೆ ಅಧೀನರಾಗಿರಿ, ಲೂಕ 9:23. ಆದಾಗ್ಯೂ, ರೋಮಾಪುರದವರಿಗೆ 12:1 ರ ಅಭಿಪ್ರಾಯವು ಅದಾಗಿರುವುದಿಲ್ಲ. *"ನಿಮ್ಮ ದೇಹಗಳನ್ನು ಸಮರ್ಪಿಸಿ"* ಎಂಬ ಆಜ್ಞೆಯು ಶಾಶ್ವತವಾಗಿ ಸಮರ್ಪಣೆ, ಒಪ್ಪಿಸಿಕೊಡುವಿಕೆ, ಮತ್ತು ಸಂಪೂರ್ಣವಾಗಿ ದೇವರಿಗೆ ವಿಧೇಯರಾಗುವುದನ್ನು ಒಳಗೊಂಡಿದೆ. ಇದು ರಕ್ಷಣೆಯಲ್ಲ ರಕ್ಷಣೆಯು ಸಂಪೂರ್ಣವಾಗಿ ಕೇವಲ ಕ್ರಿಸ್ತನ ಯಜ್ಞದ ಮೇಲೆ ಆಧಾರಿತವಾಗಿದೆ. ಇದು ವ್ಯತ್ಯಾಸವುಳ್ಳದಾಗಿದೆ. ಇದು ನಿಮ್ಮ ಯಜ್ಞವಾಗಿದೆ. ಇದು ಪ್ರತಿದಿನ ಅರ್ಪಿಸುವ ಯಜ್ಞವಲ್ಲ. ಇದು ನಿಮ್ಮ ಜೀವಿತವನ್ನು ಷರತ್ತುಬದ್ಧತೆಯಿಲ್ಲದೆ ಮತ್ತು ಸದಾಕಾಲವೂ ದೇವರಿಗೆ ಮೀಸಲಾಗಿಯೂ, ಮೆಚ್ಚಿಗೆಯಾಗಿಯೂ, ಇರುವ ಸಜೀವಯಜ್ಞವಾಗಿ ಅರ್ಪಿಸಿರಿ. ಇದು ಆತನ ಮಹಿಮೆಗಾಗಿ ಮತ್ತು ಆತನು ನಿರ್ಬಂಧಿಸದೆ ಉಪಯೋಗಿಸಲು ನಿಮ್ಮನ್ನೇ ನೀವು ದೇವರಿಗೆ ಸ್ವಯಂ ಸೇವಕರಾಗಿ ಒಪ್ಪಿಸಿ ಕೊಡುವ ಒಂದು ಉಡುಗೊರೆಯಾಗಿದೆ.

**ಈ ಯಜ್ಞವನ್ನು ಅರ್ಪಿಸುವುದು ಯಾಕೆ?** ಯಾಕಂದರೆ ಇದು ಆತನ ಕನಿಕರಕ್ಕಾಗಿದೆ. ರೋಮಾಪುರದವರಿಗೆ ಅಧ್ಯಾಯ 1-11 ದೇವರ ಕನಿಕರದ ಬಗ್ಗೆ ವಿವರಿಸುತ್ತದೆ. ರೋಮಾಪುರದವರಿಗೆ 12:1 ಆ ಕನಿಕರದ ನಿಮಿತ್ತವಾಗಿ ನೀವು ಏನನ್ನು ಮಾಡಬೇಕೆಂದು ದೇವರು ಬಯಸುತ್ತಾನೆ ಎಂಬುದರ ಬಗ್ಗೆ ಹೇಳುತ್ತದೆ. ರೋಮಾಪುರದವರಿಗೆ 12:2 ನಿಮ್ಮ *ಯಜ್ಞವನ್ನು ಅರ್ಪಿಸಿದ* ನಂತರದ ಜೀವಿತದ ಬಗ್ಗೆ ಎರಡು ಉಪದೇಶಗಳನ್ನು ಕೊಡುತ್ತದೆ. ದೇವರು ನಿಮ್ಮನ್ನು ರಕ್ಷಿಸುವುದರಲ್ಲಿ ಮತ್ತು ಶುದ್ಧೀಕರಿಸುವುದರಲ್ಲಿ ತೋರಿಸಿದ ಹೆಚ್ಚಿನ ಕನಿರದ ಬಗ್ಗೆ ಮೊದಲ ಹನ್ನೊಂದು ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಆದುದರಿಂದ, ನಿಮ್ಮನ್ನೇ ದೇವರಿಗೆ ಅರ್ಪಿಸಿರಿ. ಆತನು ನಿಮ್ಮನ್ನು ಈ ಜೀವಿತದಲ್ಲಿ ಮತ್ತು ನಿತ್ಯತ್ವದಲ್ಲಿ ಆಶೀರ್ವದಿಸುತ್ತಾನೆ. ಆದಾಗ್ಯೂ, ನಿಮ್ಮ ಯಜ್ಞಕ್ಕಾಗಿ ಸರಿಯಾದ ಉತ್ತೇಜನವು ನಿಮ್ಮ ಮುಂದಿರುವುದಿಲ್ಲ. ಅದು ನಿಮ್ಮ ಹಿಂದೆ ಇದೆ. ನಿಮ್ಮ ಸರಿಯಾದ ಪ್ರೇರಣೆಯು ದೇವರು ಈಗಾಗಲೇ ನಿಮಗಾಗಿ ಏನು ಮಾಡಿದ್ದಾನೆ ಎಂಬುದರ ಮೇಲೆ ಆಧಾರವಾಗಿದೆ. ಯೇಸು ಕ್ರಿಸ್ತನು ಮೊಳೆಗಳಿಂದ ಜಡಿಯಲ್ಪಟ್ಟ ಗಾಯಗಳುಳ್ಳ ತನ್ನ ಕೈಗಳನ್ನು ನಿಮಗಾಗಿ ಮೇಲಕ್ಕೆತ್ತಿ ಹೀಗೆ ಹೇಳುವುದನ್ನು ಊಹಿಸಿಕೊಳ್ಳಿ, "ಇದನ್ನು ಕೇವಲ ನಿನಗಾಗಿ ನಾನು ಮಾಡಿದ್ದೇನೆ, ಈಗ ನನಗಾಗಿ ಮಾಡು." ರೋಮಾಪುರದವರಿಗೆ 12:1 ರ ಅರ್ಥವೇ ಇದಾಗಿದೆ.

**ಯಾಕೆ ಒಂದೇ-ಬಾರಿಗೆ ಯಜ್ಞವನ್ನು ಅರ್ಪಿಸಬೇಕು?** ಯಾಕಂದರೆ ರೋಮಾಪುರದವರಿಗೆ 12:1-2 ರ ಪದಗಳ ಅರ್ಥವೇ ಇದಾಗಿದೆ. ಇಲ್ಲಿನ ಕ್ರಿಯಾಪದವು *"ಇಹಲೋಕದ ನಡವಳಿಕೆಯನ್ನು ಅನುಸರಿಸದೆ"* ಮತ್ತು 12:2 *"ನೂತನಮನಸ್ಸನ್ನು ಹೊಂದಿಕೊಂಡು"* ಎಂಬುದು ವರ್ತಮಾನಕಾಲದಲ್ಲಿದೆ. ಅದರ ಅರ್ಥ ಆ ಎರಡು ಕಾರ್ಯಗಳನ್ನು ಈಗ ಮಾಡಿರಿ ಮತ್ತು ಅದನ್ನೇ ನಿಮ್ಮ ಜೀವನದಾದ್ಯಂತ ಮಾಡಿರಿ. ಆದಾಗ್ಯೂ, 12:1 ರಲ್ಲಿ *"ನಿಮ್ಮ ನಿಮ್ಮ ದೇಹಗಳನ್ನು ಸಮರ್ಪಿಸಿ"* ಎಂಬ ಕ್ರಿಯಾಪದವು ಗ್ರೀಕ್‌ನಲ್ಲಿ ಸರಳ ವರ್ತಮಾನ ಕಾಲದಲಿಲ್ಲ. ಗ್ರೀಕ್‌ಭಾಷೆಯಲ್ಲಿ, ಇದು ಒಬ್ಬ ವ್ಯಕ್ತಿಯ ಕ್ರಿಯೆ ಎಂಬ ಅರ್ಥವನ್ನು ಕೊಡುತ್ತದೆ. ಅದನ್ನು ನಿರಂತರವಾಗಿ ಮಾಡಿರಿ ಎಂಬ ಅರ್ಥವಲ್ಲ. ಒಂದೇ ಬಾರಿಗೆ ಶಾಶ್ವತವಾಗಿ ಮಾಡಿರಿ ಎಂದರ್ಥ. ಇದು ನಿಮ್ಮನ್ನು ದೇವರಿಗೆ ನಿರ್ಣಾಯಕವಾಗಿ ಪ್ರತಿಷ್ಠಿಸಿಕೊಳ್ಳುವುದಾಗಿದೆ. ನಿಮ್ಮನ್ನು ದೇವರಿಗೆ ಯಜ್ಞವಾಗಿ ಅರ್ಪಿಸಿರಿ. ರೋಮಾಪುರದವರಿಗೆ 12:1 ನಿಮ್ಮ ಯಜ್ಞವನ್ನು ಕುರಿತಾಗಿದೆ. ಇದು ನಿಮ್ಮನ್ನು ನೀವು ದೇವರ ಯಜ್ಞವೇದಿಯ ಮುಂದೆ ಶಾಶ್ವತವಾಗಿ ಅರ್ಪಿಸುವುದಾಗಿದೆ.

**ಎರಡು ದೃಷ್ಟಾಂತಗಳು.** ಧರ್ಮೋಪದೇಶಕಾಂಡ 15:12-17 ಇದಕ್ಕೆ ಉದಾಹರಣೆಯನ್ನು ಕೊಡುತ್ತದೆ. ಬಿಡುಗಡೆ ಹೊಂದಿದ ಒಬ್ಬ ಇಬ್ರಿಯ ದಾಸನು *ಸ್ವಯಂಪ್ರೇರಿತವಾಗಿ* ಮತ್ತು ಶಾಶ್ವತವಾಗಿ ತಿರುಗಿ ತನ್ನ ಯಜಮಾನನಿಗೆ ದಾಸನಾಗಬಹುದು. ಅಂತಹ ಆಯ್ಕೆಯು ತನ್ನ ಹಿಂದಿನ ಯಜಮಾನನ ದಯೆಯ ಮೇಲೆ ಆಧಾರವಾಗಿರುತ್ತದೆ. ಇದು ದಾಸನು ತನ್ನ ಯಜಮಾನನಿಗೆ ತೋರಿಸಿದ ಪ್ರೀತಿಯ ಪ್ರೇರಣೆಯಾಗಿತ್ತು. ಇದು ಶಾಶ್ವತವಾದದ್ದು. ದಾಸನ ಕಿವಿಯನ್ನು ಚುಚ್ಚಲು ಒಂದು ಸೂಜಿಯನ್ನು ಉಪಯೋಗಿಸಲಾಗುತ್ತಿತ್ತು ಅದು ಅವನು ಜೀವನಪೂರ್ತಿಯಾಗಿ ತನ್ನ ಯಜಮಾನನಿಗೆ ದಾಸನಾಗಿರುವುದನ್ನು ಸೂಚಿಸುತ್ತದೆ. ಗುಲಾಮನಾಗಿರುವ ಈ ಆಯ್ಕೆಯು ದಾಸನಿಗೆ ಬಿಟ್ಟದ್ದು. ಅವನಿಗೆ ಒತ್ತಾಯ ಮಾಡುತ್ತಿರಲಿಲ್ಲ. ಅದು ಶಾಶ್ವತವಾಗಿರುವ ಒಂದು ನಿರ್ಧಾರವಾಗಿತ್ತು. ಹಳೆ ಒಡಂಬಡಿಕೆಯಲ್ಲಿ ಪ್ರಾಣಿಗಳ ಯಜ್ಞಗಳನ್ನು ಅರ್ಪಿಸುವ ಮತ್ತೊಂದು ಉದಾಹರಣೆಯಿದೆ. ಒಂದು ಪ್ರಾಣಿಯನ್ನು ಯಜ್ಞವೇದಿಯ ಮೇಲೆ ಅರ್ಪಿಸಲು ಅದು ಅಂಗೀಕರಿಸಲ್ಪಡಬೇಕು. ರೋಗ ಅಥವಾ ದೋಷವುಳ್ಳ ಪ್ರಾಣಿಯನ್ನು ಅಂಗೀಕರಿಸಲಾಗುತ್ತಿರಲಿಲ್ಲ, ಯಾಜಕಕಾಂಡ 1-5. ರೋಮಾಪುರದವರಿಗೆ 12:1 ರ ಪ್ರಕಾರ ಮೀಸಲಾಗಿಯೂ ಮತ್ತು ಮೆಚ್ಚಿಗೆಯಾಗಿರುವ ಯಜ್ಞದ ಭಾಗವನ್ನು ವಿವರಿಸುತ್ತದೆ. ಯಜ್ಞವನ್ನು ಅರ್ಪಿಸಿದ ಪ್ರಾಣಿಯು ಸತ್ತಾಗ ಅದು ಶಾಶ್ವತವಾದ ಯಜ್ಞವನ್ನು ವಿವರಿಸುತ್ತದೆ. ಯಜ್ಞವನ್ನು ಅರ್ಪಿಸಿದ ಯಾವುದೇ ಪ್ರಾಣಿಯು ಯಜ್ಞವೇದಿಯ ಮೇಲೆ ಸುಡಲು ಪ್ರಾರಂಭಿಸಿದಾಗ ಅದು ತೆವಳಿ ಬಿದ್ದು ಹೋಗುವುದಿಲ್ಲ. ದಿನದ ಅಂತ್ಯದಲ್ಲಿ ಯಾವುದೇ ಯಾಜಕನು ಪ್ರಾಣಿಯನ್ನು ಹಿಂತೆಗೆದುಕೊಂಡು ಅದನ್ನು ಬಹುಶಃ ಮತ್ತೊಂದು ದಿನದಂದು ಅರ್ಪಿಸುವುದಿಲ್ಲ. ಅದು ಶಾಶ್ವತವಾಗಿ ಅರ್ಪಿಸುವ ಯಜ್ಞವಾಗಿತ್ತು. ರೋಮಾಪುರದವರಿಗೆ 12:1 ರ ಪ್ರಕಾರ ನಿಮ್ಮ ಯಜ್ಞವು ಯಜ್ಞವೇದಿಯ ಮೇಲೆ ಸುಡುವ ಸಂದರ್ಭದಲ್ಲಿ ಅದನ್ನು ಹಿಂತೆಗೆದುಕೊಳ್ಳುವುದಾದರೆ ಅದು ಎಂದಿಗೂ ರೋಮಾಪುರದವರಿಗೆ 12:1 ರ ಯಜ್ಞವಾಗಿರುವುದಿಲ್ಲ.

**ನಿಮ್ಮ ಯಜ್ಞವನ್ನು ಪದೇ ಪದೇ ಅರ್ಪಿಸುವುದು.** ರೋಮಾಪುರದವರಿಗೆ 12:1 ರ ಪ್ರಕಾರ ನಿಮ್ಮ ಯಜ್ಞವನ್ನು ಪದೇ ಪದೇ ನೀವು ಅರ್ಪಿಸಬೇಕೇ? ಹೌದು, ಒಂದು ವೇಳೆ ನಿಮ್ಮ ಯಜ್ಞವು ಅಂಗೀಕರಿಸಲ್ಪಡದಿದ್ದರೆ. ರೋಮಾಪುರದವರಿಗೆ 12:1 ರ ಯಜ್ಞವು ಮೀಸಲಾಗಿಯೂ, ಮೆಚ್ಚಿಗೆಯಾಗಿಯೂ, ಮತ್ತು ಸಜೀವವಾಗಿರಬೇಕು. ನೀವು ಯೇಸುವನ್ನು ನಂಬುವುದರಿಂದ ಬದುಕುತ್ತಿದ್ದೀರಿ, ಯಾಕಂದರೆ ನೀವು *"ಮರಣದಿಂದ ಪಾರಾಗಿ ಜೀವಕ್ಕೆ ಸೇರಿದದೀರಿ,"* ಯೋಹಾನ 5:24 ಮೆಚ್ಚಿಗೆಯಾದ ಯಜ್ಞವಾಗಿರುವುದು ನಿಮ್ಮ ಜವಾಬ್ದಾರಿಯಾಗಿದೆ. ಹಳೆ ಒಡಂಬಡಿಕೆಯಲ್ಲಿ ಪ್ರಾಣಿಗಳನ್ನು ಯಜ್ಞವಾಗಿ ಅರ್ಪಿಸಲು ಅಂಗೀಕರಿಸಲ್ಪಡಬೇಕಾಗಿತ್ತು. ಯಾವ ಪ್ರಾಣಿಯು ಪರಿಪೂರ್ಣವಲ್ಲ. ಆದರೆ ಅದು ರೋಗವಿಲ್ಲದ್ದು, ಆರೋಗ್ಯಕರ, ಮತ್ತು ದೋಷವಿಲ್ಲದಾಗಿರಬೇಕು. ರೋಮಾಪುರದವರಿಗೆ 12:1 ರ ಯಜ್ಞಕ್ಕಾಗಿ ಅದು ಎರಡು ಅಂಶಗಳನ್ನು ವಿವರಿಸುತ್ತದೆ. ಮೊದಲನೆಯದು, ನಿಮ್ಮ ಯಜ್ಞವು ರೋಗವಿಲ್ಲದಾಗಿರಬೇಕು. ಪಾಪದ ರೋಗ ಮತ್ತು ದೇವರಿಂದ ಅಗಲಿದ್ದನ್ನು ರಕ್ಷಣೆಯ ಮೂಲಕ ಗುಣಪಡಿಸಿಕೊಳ್ಳಬೇಕು. ಅದಕ್ಕಾಗಿಯೇ ರೋಮಾಪುರದವರಿಗೆ 12:1 ನ್ನು ಕೇವಲ ವಿಶ್ವಾಸಿಗಳಿಗೆ ಬರೆಯಲ್ಪಟ್ಟಿದೆ (ಆ ವಚನದಲ್ಲಿ "ಸಹೋದರರೇ" ಎಂಬ ಪದದಿಂದ ಸೂಚಿಸಲಾಗಿದೆ). ಅವಿಶ್ವಾಸಿಗಳ ಯಜ್ಞವು ಅಂಗೀಕರಿಸಲ್ಪಡುವುದಿಲ್ಲ ಯಾಕಂದರೆ ಅದನ್ನು ರಕ್ಷಣೆ ಹೊಂದಿದ *ನಂತರವೇ* ಹೊರತು ರಕ್ಷಣೆ ಹೊಂದುವದಕ್ಕೂ *ಮುಂಚೆ* ಅರ್ಪಿಸಲಾಗುವುದಿಲ್ಲ. ನೀವು ಆತನನ್ನು ಹಿಂಬಾಲಿಸುವುದಕ್ಕೂ ಮೊದಲೇ ಯೇಸುವಿನ ಬಳಿಗೆ ಬರಬೇಕು. ನಿಮ್ಮ ರಕ್ಷಣೆಯ ಬಗ್ಗೆ ನಿಶ್ಚಯಿಸಿಕೊಳ್ಳಲು www.Gospel316.org. ಭೇಟಿ ನೀಡಿ. ಮೀಸಲಾದ ಭಾಗವು ವಿಶ್ವಾಸಿಗಳ ಜೀವಿತದಲ್ಲಿ ಆತ್ಮೀಕ ಶುದ್ಧೀಕರಣದ ಮೆಚ್ಚಿಗೆಯ ಹಂತವನ್ನು ಸೂಚಿಸುತ್ತದೆ. ಆಗ ಮಾತ್ರ ರೋಮಾಪುರದವರಿಗೆ 12:1 ರ ಯಜ್ಞವು ದೇವರಿಗೆ ಮೀಸಲಾಗಿರುತ್ತದೆ. *"ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹವಾಸವನ್ನು ಬಿಟ್ಟು ತನ್ನನ್ನು ಶುದ್ಧಮಾಡಿಕೊಂಡರೆ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು; ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸಿದ್ಧನಾಗಿಯೂ ಇರುವನು."* 2 ತಿಮೊಥೆಯನಿಗೆ 2:21 ನೀವು ಪರಿಪೂರ್ಣರಾಗಿರಲು ಸಾಧ್ಯವಿಲ್ಲ. ಆದಾಗ್ಯೂ, ನೀವು ನಿಮ್ಮನ್ನು ಆತ್ಮೀಕ ಆರೋಗ್ಯದಲ್ಲಿ ಮತ್ತು ಪರಿಶುದ್ಧತೆಯಲ್ಲಿ ಸಮರ್ಪಕರಾಗಿ ಅರ್ಪಿಸಬಹುದು. ಮೀಸಲಾಗಿಯೂ ಮತ್ತು ಮೆಚ್ಚಿಗೆಯಾಗಿಯೂ ಅರ್ಪಿಸಿದ ಯಜ್ಞವನ್ನು ದೇವರು ಅಂಗೀಕರಿಸಿದ ನಂತರ, ನೀವು ಅದನ್ನು ತಿರುಗಿ ಅರ್ಪಿಸುವ ಅಗತ್ಯವಿಲ್ಲ. ಆದಾಗ್ಯೂ, ನಿಮ್ಮ ಯಜ್ಞವು ದೇವರಿಂದ ಅಂಗೀಕರಿಸಲ್ಪಡದಿದ್ದರೆ, ಅದು ತಾತ್ಕಾಲಿಕವಾಗಿತ್ತು ಅಥವಾ ಅದು ಪರಿಶುದ್ಧವಾಗಿರಲಿಲ್ಲ, ಅದಕ್ಕಾಗಿಯೇ ಅದನ್ನು ಪುನರಾರ್ಪಿಸಬೇಕಾಗುತ್ತದೆ. ನಿಮ್ಮನ್ನು ಶಾಶ್ವತವಾಗಿಯೂ, ಮೀಸಲಾಗಿಯೂ, ಮತ್ತು ಮೆಚ್ಚಿಗೆಯಾಗಿಯೂ ಅರ್ಪಿಸಿರಿ. ಸ್ವಯಂಸೇವಕರಾಗಿ ಮತ್ತು ಶಾಶ್ವತವಾಗಿ ದೇವರಿಗೆ ದಾಸರಾಗಿರಿ. ಇದನ್ನು ಹಗುರವಾಗಿ ಮಾಡಬೇಡಿ. ರಕ್ಷಣೆ ಹೊಂದಿದ ನಂತರ ಬಹಳ ಗಂಭೀರವಾಗಿ ಮಾಡುವ ನಿರ್ಧಾರವಾಗಿದೆ. ನಿಮ್ಮ ಯಜ್ಞವು ಅಂಗೀಕರಿಸಲ್ಪಟ್ಟ ನಂತರ, ರೋಮಾಪುರದವರಿಗೆ 12:2 ನ್ನು ಮುಂದುವರಿಸುವ ಮೂಲಕ ಹಳೇ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಯೇಸು ಕ್ರಿಸ್ತನ ನಿಜವಾದ ಹಿಂಬಾಲಕರಾಗುವುದು. ಎಲ್ಲವನ್ನೂ ಆತನು ನಿಮಗಾಗಿ ಮಾಡಿದ್ದಾನೆ, ಇದನ್ನು ಆತನಿಗಾಗಿ ಮಾಡಿರಿ!

**ನೀವು ಯಜ್ಞವನ್ನು ಅರ್ಪಿಸಿದ ನಂತರದ ಜೀವಿತ.** *"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ."* ರೋಮಾಪುರದವರಿಗೆ 12:2. ರೋಮಾಪುರದವರಿಗೆ 12:1 ರ ಪ್ರಕಾರ ನೀವು ಯಜ್ಞವನ್ನು ಅರ್ಪಿಸಿದ ನಂತರ ಜೀವಿತದ ಬಗ್ಗೆ ಈ ವಚನವು ಉಪದೇಶವನ್ನು ಕೊಡುತ್ತದೆ. ಈ ಉಪದೇಶಗಳು ವರ್ತಮಾನ ಕಾಲದಲ್ಲಿದೆ ಅವುಗಳ ಅರ್ಥ ನಿರಂತರವಾಗಿ ಹಳೇ ನಡವಳಿಕೆಯನ್ನು ಅನುಸರಿಸದೆ ಮತ್ತು ನೂತನಮನಸ್ಸನ್ನು ಹೊಂದಿಕೊಂಡು ನಿರಂತರವಾಗಿ ಪರಲೋಕಭಾವದವರಾಗಿರಿ. ಅವುಗಳ ನಡವಳಿಕೆಯನ್ನು ಅನುಸರಿಸದೆ, ಈ ಲೋಕದ ಪಾಪಕ್ರಿಯೆಗಳಿಗೆ ಒಳಪಡಬೇಡಿರಿ. ನೀವು ಒಬ್ಬ ವಿಶ್ವಾಸಿಯಾಗಿರುವಾಗ ಲೋಕವು ನಿಮ್ಮನ್ನು ರೂಪಿಸಲು ಬಿಟ್ಟುಕೊಡಬೇಡಿ. ರೋಮಾಪುರದವರಿಗೆ 12:2 ನಿಮ್ಮನ್ನು ಹೀಗೆ ಉತ್ತೇಜಿಸುತ್ತದೆ *"ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ"* ಗ್ರೀಕ್‌ಪದವನ್ನು *ಪರಲೋಕಭಾವದವರಾಗಿರಿ ಎಂದು ಅನುವಾದಿಸುತ್ತದೆ* ಇದೇ ಪದವನ್ನು ಮತ್ತಾಯ 17:2 ಮತ್ತು ಮಾರ್ಕ 9:2 ರಲ್ಲಿ ಯೇಸು *ರೂಪಾಂತರಗೊಂಡನು ಎಂಬ ಹೇಳಿಕೆಯನ್ನು ನೀಡುತ್ತದೆ.* ರೋಮಾಪುರದವರಿಗೆ 12:2 ನೀವು ನೂತನಮನಸ್ಸನ್ನು ಹೊಂದಿಕೊಳ್ಳುವ ಮೂಲಕ (ನೂತನಪಡಿಸಿಕೊಳ್ಳುವುದು, ಉತ್ತಮಕ್ಕಾಗಿ ಪರಿಪೂರ್ಣವಾಗಿ ಬದಲಾಗುವುದು) ರೂಪಾಂತರಗೊಳ್ಳುವುದಕ್ಕೆ ಉತ್ತೇಜಿಸುತ್ತದೆ. ರೂಪಾಂತರಗೊಳ್ಳುವ ಪ್ರಕ್ರಿಯೆಯು (ಕಂಬಳಿ ಹುಳವು ಚಿಟ್ಟೆಯಾಗಿ ಪರಿವರ್ತನೆಯಾಗುವುದಕ್ಕಿಂತಲೂ ಅಸಾಧಾರಣವಾಗಿದೆ) ನೀವು ದೇವರ ವಾಕ್ಯವನ್ನು ಕಲಿತು ಮತ್ತು ಅದರಂತೆಯೇ ಜೀವಿಸುವ ಮೂಲಕ ನೆರವೇರಿಸಲಾಗುತ್ತದೆ. ರೋಮಾಪುರದವರಿಗೆ 12:1 ರ ಪ್ರಕಾರ ಯಜ್ಞವನ್ನು ಅರ್ಪಿಸಿರಿ. ಲೋಕದ ಆಕಾರಕ್ಕೆ ನೀವು ಹೊಂದಿಕೊಳ್ಳಬೇಡಿ. ದೇವರ ವಾಕ್ಯವನ್ನು ಕಲಿತು ಮತ್ತು ಅದರಂತೆ ನಡೆಯುವ ಮೂಲಕ ರೂಪಾಂತರಗೊಳ್ಳಿರಿ. ಆಗ ನೀವು ದೇವರ ಚಿತ್ತವನ್ನು ವಿವೇಚಿಸಿ ಮತ್ತು ಅದರಂತೆ ಜೀವಿಸಬಹುದು.

**"ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ." ರೋಮಾಪುರದವರಿಗೆ 12:2**

*ಎ ಲಿವಿಂಗ್‌ಸ್ಯಾಕ್ರಿಫೈಸ್* © 2026 ಜಾನ್‌ಡಿ. ಮೊರಿಸ್ III ರವರಿಂದ ಆಕ್ಸ್ ಒನ್‌ಯೆಯಿಟ್ ರವರಿಂದ ಮುದ್ರಿಸಲಾಗಿದೆ. ನೀವು ಮುಕ್ತವಾಗಿ ಮುದ್ರಣ, ನಕಲು ಮಾಡಬಹುದು, ಅಂಚೆ, ಇಮೇಲ್‌ಅಥವಾ ಸಂದೇಶವನ್ನು ಪೂರ್ಣವಾಗಿ ಒಳಗೊಂಡಿರುವ ಹೇಳಿಕೆಗಳಲ್ಲಿ ಯಾವುದೇ ವಿಷಯಗಳನ್ನು ಬದಲಾಯಿಸದೆ ಕಳುಹಿಸಬಹುದು. ನೀವು ನಿಮ್ಮ ಸೇವೆಯನ್ನು ಅಥವಾ ಸಭೆಯ ಹೆಸರನ್ನು ಅಥವಾ ಚಿಹ್ನೆಯನ್ನು ಮೊಲದ ಪುಟದ ಮೇಲ್ಭಾಗದಲ್ಲಿ ಸೇರಿಸಬಹುದು ಮತ್ತು ನಿಮ್ಮನ್ನು ಸಂಪರ್ಕಿಸಬಹುದಾದ ಮಾಹಿತಿಯನ್ನು ಪುಟ 2 ರ ಕೆಳಭಾಗದ ದಪ್ಪನೆಯ ಸಾಲಿನ ಮೇಲೆ ಬರೆಯಿರಿ. *Sacrifice316* ಎಂಬುದು ಕೇವಲ ಸತ್ಯವೇದ ಆಧಾರಿತವಾಗಿದೆ. ಇದು ಜನರು ಯೇಸುವಿನಲ್ಲಿ ಕೇವಲ ವಿಶ್ವಾಸಿಗಳಾಗಿರುವುದಕ್ಕಿಂತ ಹೆಚ್ಚಾಗಿ ಆತ್ಮೀಕವಾಗಿ ಬೆಳೆಯಲು ಸಹಾಯ ಮಾಡುತ್ತದೆ. ನೀವು ಆಕ್ಸ್ ಒನೆ ಯೆಯಿಟ್‌ಗೆ (ಸಾಧ್ಯವಾದರೆ ಆಂಗ್ಲ ಭಾಷೆಯಲ್ಲಿ) ಇಮೇಲನ್ನು ಕಳುಹಿಸಿ: Hello@Mail316.org. ಭಾಷಾಂತರ ಸೇವೆಗಳನ್ನು www.ChristianLingua.com. ರಿಂದ ಒದಗಿಸಲಾಗಿದೆ. *ಎ ಲಿವಿಂಗ್‌ಸ್ಯಾಕ್ರಿಫೈಸ್* 48 ಭಾಷೆಗಳಲ್ಲಿ ಉಚಿತವಾಗಿ www.Sacrifice316.org. ರಲ್ಲಿ ಲಭ್ಯವಿದೆ. ಆಂಗ್ಲ ಭಾಷೆಯಲ್ಲಿನ ಹೇಳಿಕೆಗಳನ್ನು The Lockman Foundation's New American Standard Bible 1995 ರಿಂದ ತೆಗೆದುಕೊಳ್ಳಲಾಗಿದೆ. ಈ ಭಾಷಾಂತರದಲ್ಲಿನ ಸತ್ಯವೇದದ ಹೇಳಿಕೆಗಳನ್ನು ಇದರಿಂದ ತೆಗೆದುಕೊಳ್ಳಲಾಗಿದೆ: BSI JV